# ವಿಷಯಕ್ಕೆ ನೇರ ಬಾ

ನಿತ್ಯವೂ ಮಾತಾಡಿದ್ದು ಏನೇನೋ
ಸಮುದ್ರ ಆವಿಯಾಗಿ
ವರ್ಷಕ್ಕಾಗುಷ್ಟು ಮಳೆ ಸುರಿದು ಹೋಯ್ತು
ನಮ್ಮ ಬೆವರ ಹೀರಿದ ಗಾಳಿ
ಭೂಮಂಡಲವನೇ ಸುತ್ತಿ ಬಂತು
ಆದರೆ ನೀನು ಮಾತ್ರ
ವಿಷಯಕ್ಕೆ ಬರಲೇ ಇಲ್ಲ

ಮಳೆ–ಚಿಗುರು, ಗಾಳಿ–ಗಂಧದಷ್ಟು
ಅಪ್ಪಟ ಮಾತನಾಡು
ಸುಮ್ಮನೇ ಸುಸ್ತಾಗುವಷ್ಟು
ತಾಳ್ಮೆ ಸಂಪಾದಿಸಿ
ನಿಟ್ಟುಸಿರ ಬಿಟ್ಟು ಮಣ್ಣಾಗುವುದರಲ್ಲಿ
ಹುಟ್ಟು ಮತ್ತು ಪ್ರೀತಿಯ ಅರ್ಥ
ಕೆಡಿಸಬೇಡ



ಇದ್ದದ್ದನ್ನು ತೋರುವುದಕ್ಕೆ
ನಾನು ಭಯಪಡಲಾರೆ.
ನಿಮ್ಮ ಮನೆ ಕನ್ನಡಿಯೆದುರು
ನೀನು ನಿಂತಾಗ
ಬಿಂಬ ಸಜೀವವಾಗಿರುವುದರಲ್ಲಿ
ಸುಳ್ಳಿದೆಯೇನು?

ಹಾಗೆ
ಶಬ್ದದ ಸೋಗು ಕಳಚಿ ಮಾತಾಡು
ಇಲ್ಲದಿದ್ದರೆ
ನಿನ್ನ ಒಲಿಸಿಕೊಳ್ಳಲೆಂದೇ
ಕವಿತೆಯ ಆಸರೆ ಬೇಡಿದ ನನಗೆ
ಕವಿತೆಯೂ ದೂರ ನಡೆದೀತು

ಅರ್ಥವಾಯಿತಾ?
ಅನುಭವ ತಾಗಿತ?
ಮಾತಿಗೆ ಅರ್ಥದ ಬದಲಿ
ಅನುಭವ ತುಂಬಿಕೊಳ್ಳಲು
ನಿನ್ನ ಜೀವಕೋಶ ಹೊತ್ತು
ಹತ್ತಿರ ಬರುವುದರ ಬಗ್ಗೆ ಮಾತನಾಡು

ವಿಷಯಕ್ಕೆ ನೇರ ಬಾ

**● ಮಲ್ಲಿಕಾರ್ಜುನಗೌಡ ತೂಲಹಳ್ಳಿ**

ಕಲೆ: ಡಿ.ಕೆ. ರಮೇಶ್